**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ**

**ಸಿ.ಸಿ.ನಂಃ 939/2017**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

-: **ವಿರುದ್ಧ** :-

**ಆರೋಪಿಃ**

3. ಶ್ರೀಮತಿ ಕವಿತಾ,
ಕೋಂ ಶ್ರೀ ಹನುಮಂತಪ್ಪ,
35 ವರ್ಷಗಳು,
ವಾಸಃ ಶಿರಗಲಿಪುರ ಗ್ರಾಮ,
ತರೀಕೆರೆ ತಾಲ್ಲೂಕು.

5. ಶ್ರೀಮತಿ ಶಶಿಕಲಾ,
ಕೋಂ ಶ್ರೀ ನಾಗರಾಜಪ್ಪ,
28 ವರ್ಷಗಳು,
ವಾಸಃ ಶಿರಗಲಿಪುರ ಗ್ರಾಮ,
ತರೀಕೆರೆ ತಾಲ್ಲೂಕು.

6. ಶ್ರೀಮತಿ ಮಂಜುಳಾ,
ಕೋಂ ಶ್ರೀ ಮೈಲಾರಪ್ಪ,
30 ವರ್ಷಗಳು,
ವಾಸಃ ಶಿರಗಲಿಪುರ ಗ್ರಾಮ,
ತರೀಕೆರೆ ತಾಲ್ಲೂಕು.

**ದೋಷಾರೋಪಣೆ**

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 16.09.2017 ರಂದು ರಾತ್ರಿ 9.00 ರ ಗಂಟೆಗೆ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿನ ಶಿರಗಲಿ ಗ್ರಾಮದಲ್ಲಿ ಚಾಸಾ-1/ ಶ್ರೀ ಕುಮಾರ ರವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದಾಗ, ಆದೇ ಸಮಯದಲ್ಲಿ 3, 5 ಮತ್ತು 6 ನೇ ಆರೋಪಿತರಾದ ನೀವುಗಳು ಅಪರಾಧವನ್ನು ಮಾಡುವ ಸಮಾನ ಉದ್ದೇಶದಿಂದ ಇತರ ಆರೋಪಿಗಳೊಂದಿಗೆ ಸೇರಿಕೊಂಡು ಚಾಸಾ-1 ರವರ ಶಾಂತಿಭಂಗ ಮಾಡುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿರುತ್ತೀರಿ. ಈ ರೀತ್ಯ 3, 5 ಮತ್ತು 6 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 3, 5 ಮತ್ತು 6 ನೇ ಆರೋಪಿಗಳಾದ ನೀವು ಇತರ ಆರೋಪಿಗಳೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ಚಾಸಾ-1 ರವರಿಗೆ ದೊಣ್ಣೆಯಿಂದ ಹೊಡೆದಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 3, 5 ಮತ್ತು 6 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಮುಾರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 3, 5 ಮತ್ತು 6 ನೇ ಆರೋಪಿಗಳಾದ ನೀವು ಇತರ ಆರೋಪಿಗಳೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ಚಾಸಾ-1 ರವರನ್ನು ನೆಲಕ್ಕೆ ಬಿಳಿಸಿ ಕಾಲುಗಳಿಂದ ತಳಿದಿರುತ್ತೀರಿ ಮತ್ತು ಅವರಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 3, 5 ಮತ್ತು 6 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 326 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 3, 5 ಮತ್ತು 6 ನೇ ಆರೋಪಿಗಳಾದ ನೀವು ಇತರ ಆರೋಪಿಗಳೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಸಮಾನ ಉದ್ದೇಶವನ್ನು ಮುಂದುವರಿಸಿ, ಚಾಸಾ-1 ರವರಿಗೆ ನಮ್ಮಗಳ ವಿಚಾರಕ್ಕೆ ಬಂದರೆ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ 3, 5 ಮತ್ತು 6 ನೇ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ 3, 5 ಮತ್ತು 6 ನೇ ಆರೋಪಿಗಳಾದ ನೀವು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರಃ1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಗಳ ಉತ್ತರಃ

ಆರೋಪಿ 3: Yes

ಆರೋಪಿ 5: Yes

ಆರೋಪಿ 6: Yes

ಪ್ರಃ2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?
ಆರೋಪಿಗಳ ಉತ್ತರಃ

ಆರೋಪಿ 3: Pleaded not guilty and claimed to be tried

ಆರೋಪಿ 5: Pleaded not guilty and claimed to be tried

ಆರೋಪಿ 6: Pleaded not guilty and claimed to be tried

(ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ದಿನಾಂಕ : 20.02.2025

ಸಹಿ/-
(ರಾಹುಲ್ ಶೆಟ್ಟಿಗಾರ್)
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾದಂ., ತರೀಕೆರೆ.

ಆರೋಪಿತರ ಸಹಿಃ